ಶ್ರೀ ಬಿ. ರಾಚಯ್ಯ.—ಈಗ ಎಕ್ಸ್ ಸರ್ವಿಸ್‌ಮೆನ್ ಅನ್ನು ಆ ಕೆಲಸಕ್ಕೆ ತೆಗೆದುಕೊಳ್ಳಬೇಕು, ಅವರಿಗೆ ಉದ್ಯೋಗವನ್ನು ಕಲ್ಪಿಸಬೇಕು ಎಂದು ಆ ಸೆಕ್ಯೂರಿಟಿ ಪೋಸ್ಟ್ ಕ್ರಿಯೇಟ್ ಆಯಿತು. ಹಿಂದೆ ಆ ಪೋಸ್ಟಿಗೆ ಅಡ್ವರ್ಟೈಸ್ ಮಾಡಿದಾಗ ಅದಕ್ಕೆ ಸೂಟಬಲ್ ಕ್ಯಾಂಡಿಡೇಟ್ ಇರಲಿಲ್ಲ. ಆದ್ದರಿಂದ ಮತ್ತೆ ರೀ ಅಡರ್ಟೈಜ್ ಮಾಡಿದ್ದೇವೆ. ಅಲ್ಲಿಯವರೆಗೆ ಡೆಪ್ಯುಟೇಷನ್ ಮೇಲೆ ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಈ ಪೋಸ್ಟ್ ಪರ್ಮನೆಂಟ್ ಪೋಸ್ಟೋ, ಇದರ ಸ್ಕೇಲು ಯಾವುದು ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಫ್ಯಾಕ್ಟರಿ ಪರ್ಮನೆಂಟ್ ಅಲ್ಲ. ಇದು ಟೆಂಪರರಿ ಪೋಸ್ಟ್. ಇದರ ಗ್ರೇಡು 450 ರೂಪಾಯಿಗಳು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆ ಹುದ್ದೆಗೆ ಒಬ್ಬರು ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ತಾವು ಆ ಹುದ್ದೆಗೆ ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಸೋಲ್ಜರ್ಸ್ ಬೋರ್ಡ್ ಮತ್ತು ಸ್ಟೇಟ್ ಸೋಲ್ಜರ್ಸ್ ಬೋರ್ಡಿನವರನ್ನು ತಾವು ಕನ್‌ಸಲ್ಟ್ ಮಾಡಿದ್ದೀರಾ, ಈ ಹುದ್ದೆಗೆ ಅಲ್ಲಿ ಅರ್ಹರಾದವರು ಯಾರೂ ಸಿಕ್ಕಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಹೌದು ಕನ್‌ಸಲ್ಟ್ ಮಾಡಿದ್ದೇವೆ. ಅವರು 12 ಜನಗಳ ಲಿಸ್ಟ್ ಒಂದನ್ನು ಕಳುಹಿಸಿದ್ದರು. ಅದರಲ್ಲಿ ಇಬ್ಬರು ಮಾತ್ರ ಇಂಟರ್‌ವ್ಯೂಗೆ ಬಂದಿದ್ದರು. ಅವರು ಆ ಹುದ್ದೆಗೆ ಸೂಟಬಲ್ ಆಗಿರಲಿಲ್ಲ. ಆದ್ದರಿಂದ ಹೆಚ್ಚು ಜನ ಬಂದರೆ ಯೋಗ್ಯರಾಗಿರುವವರನ್ನು ಸೆಲೆಕ್ಟ್ ಮಾಡಿಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಮತ್ತೆ ಅದಕ್ಕೆ ರೀ ಅಡ್ವರ್ಟೈಜ್ ಮಾಡಿದ್ದೇವೆ.

Sri H. SIDDAVEERAPPA.—The Hon. Minister just now said this factory is not a permanent one. So far as I know the factory is in existence for more than 30 years. I want to know whether this factory will be transferred to somebody of your choice in private sector.

ಶ್ರೀ ಬಿ. ರಾಚಯ್ಯ.—ಅದು ಪ್ರೈವೇಟ್ ಕಂಪೆನಿ. ಸರ್ಕಾರ ಅದನ್ನು ತೆಗೆದುಕೊಂಡ ಮೇಲೆ ಇಪ್ಪತ್ತಿನವರೆಗೂ ಅಲ್ಲಿ ಕೆಲಸಮಾಡತಕ್ಕ ನೌಕರರು ಯಾರು ಇದ್ದಾರೆ ಅವರು ಖಾಯಂ ಆಗಿ ಇಲ್ಲ. ಆ ಒಂದು ಅರ್ಥದಲ್ಲಿ ನಾನು ಹೇಳಿದ್ದೇನೆ.

ಶ್ರೀ ಟಿ. ವಿ. ಕೃಷ್ಣಪ್ಪ.—ರಕ್ಷಣಾಧಿಕಾರಿ ಆ ಕಾರ್ಖಾನೆಯಲ್ಲಿ ಇರಬೇಕು ಎಂದು ಕಾನೂನು ಇರುವಾಗ ಈಗ ಆ ಕೆಲಸವನ್ನು ಯಾರು ನೋಡುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ.—ಕಾನೂನೇನೂ ಇಲ್ಲ. ಈಗ ಒಬ್ಬ ವಾಚ್‌ಮನ್ ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದಾನೆ. ಚನ್ನಪಟ್ಟಣದ ಜನಗಳು ಅನುಸರಿಸಿಕೊಂಡು ಬರುತ್ತಾ ಇರುವುದರಿಂದ ಅದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ.

Munsiff-Magistrate Court Building at Laxmeshwar Town

205. Sri SIDDAIAH KASHIMATH (Shirhatti).—

Will the Minister for Law, Labour and Parliamentary Affairs be pleased to state :—

(*a*) the year in which the Munsiff-Magistrate Court was sanctioned to Laxmeshwar in Dharwar District ;

(*b*) the year of continuation of the said court ;

(*c*) the building in which the court is now being located ;

(*d*) whether the Bar Association, Laxmeshwar has represented to Government for construction of new building for the said court ?

(*e*) whether there is any proposal before Government to sanction construction of court building and official quarters at Laxmeshwar during 1969-70 ?

Sri K. JUTTASWAMY (Minister for Law, Labour and Parliamentary Affairs).—

(*a*) and (*b*) The Munsiff-Magistrate, Savanur was itenerating to Laxmeshwar during the second and fourth weeks of every month since the year 1949 and an independent Munsiff-Magistrate's Court was established at Laxmeshwar in the year 1966. This is a permanent Court.

(*c*) The Court is temporarily located at present in the Library building of the Laxmeshwar Town Municipality.

(*d*) No.

(*e*) No. A proposal to exchange the Municipal Building at Laxmeshwar which is centrally situated, with the old court building for locating the court, is under consideration.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಲಕ್ಷ್ಮೇಶ್ವರ ಟೌನಿನಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಸಿಬ್ಬಂದಿವರ್ಗದವರಿಗೆ ಕಟ್ಟಡವನ್ನು ಕಟ್ಟುವುದಕ್ಕೆ ಹಿಂದಿನ ಬಡ್ಜೆಟ್ಟಿನಲ್ಲಿ ಒಂದು ಲಕ್ಷ 70 ಸಾವಿರ ರೂಪಾಯಿಗಳು ಮಂಜೂರಾದದ್ದು ನಿಜವೇ, ಅದನ್ನು ಕೈಬಿಡಲು ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷ್ಮೇಶ್ವರದಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಯಾವ ಹಣವನ್ನೂ ಮಂಜೂರು ಮಾಡಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಶ್ರೀಮಾನ್ ತುಕೋಳ್ ಅವರು ನ್ಯಾಯಾಧೀಶರಾಗಿದ್ದಾಗ ಲಕ್ಷ್ಮೇಶ್ವರದಲ್ಲಿರತಕ್ಕ ಮುನ್ಸೀಫ್ ಕೋರ್ಟು ಕಟ್ಟಡ ಸರಿಯಾಗಿಲ್ಲ, ಅಲ್ಲಿ ಹೊಸದಾಗಿ ಸರ್ಕಾರದವರು ಕಟ್ಟಡವನ್ನು ಕಟ್ಟಿಸಬೇಕೆಂದು ಅವರು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದು ಮತ್ತು ಅವರು ಸರ್ಕಾರಕ್ಕೆ ತಿಳಿಸಿದ್ದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿರತಕ್ಕ ಹಳೆಯ ಬಿಲ್ಡಿಂಗ್ ಯೋಗ್ಯವಾಗಿಲ್ಲ, ಆದ್ದರಿಂದ ಅಲ್ಲಿ ಒಂದು ಹೊಸದಾಗಿ ಕಟ್ಟಡಕಟ್ಟಬೇಕು ಎಂದು ಹೈಕೋರ್ಟಿನವರ ಅಭಿಪ್ರಾಯ ಇದೆ. ಈಗ ಅಲ್ಲಿ ಹಾಲಿ ಮುನ್ಸೀಫ್ ಕೋರ್ಟು ನಡೆಯುತ್ತಿರುವ ಲೈಬ್ರರಿ ಬಿಲ್ಡಿಂಗ್ ಸರಿಯಿಲ್ಲ. ಆದ್ದರಿಂದ ಈಗ ಅದನ್ನು ಪುರಸಭೆಯು ಕಟ್ಟಡಕ್ಕೆ ವರ್ಗ ಮಾಡಿಕೊಳ್ಳಿ ಎನ್ನುವ ಒಂದು ಸಲಹೆ ಇದೆ. ಆ ಸಲಹೆಯನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅಲ್ಲಿರತಕ್ಕ ಮುನ್ಸೀಫ್ ಕೋರ್ಟಿಗೆ ಸರಿಯಾದ ಜಾಗವಿಲ್ಲದೆ ಇರುವುದರಿಂದ ಅಲ್ಲಿ ಹೊಸದಾಗಿ ಕಟ್ಟಡವನ್ನು ಕಟ್ಟುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿ ವರ್ಗಾವರ್ಗಿ ಮಾಡಬೇಕೆಂಬ ಒಂದು ಸಲಹೆ ಇದೆ. ಈಗ ಹಾಲಿ ಅಲ್ಲಿ ಮುನ್ಸೀಫ್ ಕೋರ್ಟು ನಡೆಯುತ್ತಿರತಕ್ಕ ಲೈಬ್ರರಿ ಬಿಲ್ಡಿಂಗ್ ಅದು ಸಂಪೂರ್ಣವಾಗಿ ನಮ್ಮ ಕೋರ್ಟಿನ ಅವಶ್ಯಕತೆಯನ್ನು ಪೂರೈಸುವುದಿಲ್ಲ ಎನ್ನುವ ಸಮಾಚಾರವನ್ನು ಪರಿಶೀಲನೆ ಮಾಡಿ, ಅವಶ್ಯಕತೆ ಕಂಡು ಬಂದರೆ ಹೊಸಕೋರ್ಟು ಕಟ್ಟಡವನ್ನು ಕಟ್ಟಬೇಕಾಗುತ್ತದೆ.

ಶ್ರೀ ಎಂ. ಎಂ. ಜಾವಿನಟ್ಟಿ.—ಅದನ್ನು ವರ್ಗಾವಣೆ ಮಾಡುತ್ತೇನೆ ಎಂದರೆ ಈಗ ತಾವು ಯಾವ ಕಟ್ಟಡಕ್ಕೆ ಈ ಕೋರ್ಟನ್ನು ವರ್ಗಾವಣೆ ಮಾಡುತ್ತೀರೋ ಅದನ್ನು ಖರೀದಿ ಮಾಡುತ್ತೀರಾ, ಅಥವಾ ಬಾಡಿಗೆಗೆ ತೆಗೆದುಕೊಳ್ಳುತ್ತೀರಾ, ಬಾಡಿಗೆಗೆ ತೆಗೆದುಕೊಳ್ಳುವುದಾದರೆ ಎಷ್ಟು ವರ್ಷಗಳಿಗೆ ಬಾಡಿಗೆಗೆ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷ್ಮೇಶ್ವರದಲ್ಲಿ ಪುರಸಭೆಗೆ ಸೇರಿದಂತಹ ಲೈಸೆನ್ಸ್ ಕಟ್ಟಡ ಸುಮಾರು 73 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಹಳೆಯ ಬಿಲ್ಡಿಂಗ್ ಒಂದು ಲಕ್ಷ 72 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅಲ್ಲಿ ಬಿದ್ದಿರುವ ಗೋಡೆಗೆ 28 ಸಾವಿರ ರೂಪಾಯಿಗಳ ಬೆಲೆಯನ್ನು ಅಂದಾಜು ಮಾಡಿದ್ದಾರೆ. ಅಲ್ಲಿರತಕ್ಕ ಹಳೆಯ ಕೋರ್ಟ್ ಬಿಲ್ಡಿಂಗ್ ನಮ್ಮ ವಾರ್ಡಿಯ ಪ್ರಕಾರ ಒಡೆದು ಹೋಗಿದೆ ಎಂದು ವರದಿ ಬಂದಿದೆ.

Distribution of lands amongst the Harijans and Girijans in Bidar District

223. **Sri V. N. PATIL** (Humnabad).—

Will the Minister for Revenue be pleased to state :—

(*a*) the number of acres of uncultivated land distributed amongst the Harijans and Girijans and landless Agricultural workers throughout the State from January 1969 to the end of November, 1969 ;

(*b*) the extent of land distributed in Bidar District amongst Harijans and Girjans and landless workers (the figures for each Taluk may please be given, the figures of the entire villages where lands so distributed and its extent in Humnabad Taluk may please be given separately) ;

(*c*) whether it has not come to the notice of the Government that in Bidar District, major portion of the parampoke has been occupied since the last 10 to 15 years by landless persons and they are paying Shivai Jamabandi to the Government ;

(*d*) whether the Government is going to distribute the land to those who are already in possession of the land for more than 10 years and are regularly paying Shivai Jamabandi ;

(*e*) if not, the difficulty in allotting land to those genuine landless persons who are occupying the same and are in possession for years ;

(*f*) whether there was any representation by way of a memorandum to the Chief Minister during his visit to Bidar District by the District Council of Communists of Bidar for the distribution of the lands to the landless persons ;

(*g*) if so, the steps the Government has taken for distribution of the land to the landless persons ?

Sri H. V. KOUJALGI (Minister for Revenue).—

(*a*) 20,386 acres.

(*b*) Area distributed in the following Taluka :—

1. Basawakalyan ... 338 acres